**ದಿನಾಂಕಃ 10.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : 3ನೇ ಪ್ರತಿವಾದಿ ಪರ ಶ್ರೀ ಎಸ್.ಜಿ.ಎಸ್. ವಕೀಲರಿಂದಃ**

1) ವಾದಿಯು ನನಗೆ ಸಾಕ್ಷ್ಯ ನುಡಿಯುವಂತೆ ನ್ಯಾಯಾಲಯಕ್ಕೆ ಕರೆದಿದ್ದರು. ಈ ಪ್ರಕರಣದಲ್ಲಿ ನನಗೆ ಯಾವಾಗ ಸಮನ್ಸ ಬಂದಿತ್ತು ಎಂದು ನೆನಪಿಲ್ಲ. ನಾನು ಪತ್ರ ಬರಹಗಾರ ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಆದರೆ ಕರಾರು ಪತ್ರದ ಮೇಲೆ ನನ್ನ ಸಹಿ ಇರುತ್ತದೆ. ಪತ್ರ ಬರಹ ಮಾಡಲು ನಮಗೆ ತರಭೇತಿ ಆಗಿರುತ್ತದೆ ಎಂದರೆ ಸರಿ. ಪತ್ರದಲ್ಲಿ ಖಂಡಿಕೆಗಳನ್ನು ಮಾಡಬೇಕಾಗಿ ತರಭೇತಿಯಲ್ಲಿ ಹೇಳಿರುತ್ತಾರೆ ಎಂದರೆ ಸರಿ. ನಿಪಿ.2 ರ ಕರಾರು ಪತ್ರದಲ್ಲಿ ಸ್ಥಳಾವಕಾಶ ಕಡಿಮೆ ಇದ್ದ ಕಾರಣ ಖಂಡಿಕೆಗಳನ್ನು ಮಾಡಿರುವುದಿಲ್ಲ. ಕರಾರು ಪತ್ರಕ್ಕೆ ಬೇಕಾಗುವಷ್ಟು ಪುಟಗಳನ್ನು ತರಿಸಿಕೊಳ್ಳಲು ತೊಂದರೆ ಇರಲಿಲ್ಲ ಆದರೆ ಪಕ್ಷಗಾರರು ಮೊದಲೇ ನಿಪಿ.2 ರ ಪತ್ರವನ್ನು ತಂದಿದ್ದರು. ನಿಪಿ.2 ರ ಪುಟಗಳಿಗೆ ಹೊಂದಾಣಿಕೆಯಾಗುವಂತೆ ಅಕ್ಷರಗಳನ್ನು ಜೋಡಣೆ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ.2 ರಲ್ಲಿ ಹಾಕಿರುವ ಹೆಬ್ಬೆಟ್ಟಿಗೆ ಎಲ್.ಟಿ.ಎಂ. ಏಕೆ ನಮೂದು ಮಾಡಿಲ್ಲ ಎಂದರೆ ಸಾಕ್ಷಿಯು ಹೆಬ್ಬೆಟ್ಟಿನ ಜೊತೆಗೆ ಸಹಿ ಮಾಡಿರುವ ಕಾರಣ ಎಲ್.ಟಿ.ಎಂ. ಗುರುತಿಸಿಲ್ಲ ಎಂದು ನುಡಿಯುತ್ತಾರೆ. ಪತ್ರಬರಹಗಾರರು ಎಲ್.ಟಿ.ಎಂ. ಯಾರಿಗೆ ಸೇರಿದೆ ಎಂದು ಗುರುತಿಸಬೇಕು ಎಂದರೆ ಸರಿ. ನಿಪಿ.2 ರಲ್ಲಿ ಇರುವ ಹೆಬ್ಬೆಟ್ಟು ಮತ್ತು ಸಹಿಯನ್ನು ನನ್ನ ಮುಂದೆ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ.2 ಅನ್ನು ನಾನು ಸೃಷ್ಟಿ ಮಾಡಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಿಪಿ.2 ರ ಕರಾರು ಪತ್ರದ 2ನೇ ಪುಟದಲ್ಲಿ ಇರುವ ಚಿತ್ತು ಕಾಟುಗಳನ್ನು ನಾನೇ ಮಾಡಿರುತ್ತೇನೆ. ಆ ರೀತಿ ತಿದ್ದುಪಡಿ ಮತ್ತು ಚಿತ್ತು ಕಾಟುಗಳನ್ನು ಮಾಡಿರುವ ಸಂಬಂಧ ನಾನು ನನ್ನ ಸಹಿಯನ್ನು ಮಾಡಿಲ್ಲ ಮತ್ತು ಆ ಬಗ್ಗೆ ವಿವರಣೆಯನ್ನು ಪತ್ರದಲ್ಲಿ ಬರೆಯಲು ಸ್ಥಳವಕಾಶ ಇರದ ಕಾರಣ ನಾನು ಒಕ್ಕಣೆಯನ್ನು ಸಹ ಹಾಕಿಲ್ಲ. ನಿಪಿ.2 ರಲ್ಲಿ ಇರುವ ಸಂಗತಿಗಳನ್ನು ನಾನು ಮತ್ತು ವಾದಿ ಕೂಡಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಗೆ ಅನುಕೂಲ ಆಗಲೀ ಎಂಬ ಕಾರಣಕ್ಕೆ ನಿಪಿ.2 ರ ಎರಡು ಪುಟಗಳನ್ನು ಪಡೆದು ಅದರಲ್ಲಿ ಅನುಕೂಲಕ್ಕೆ ತಕ್ಕಂತೆ ಒಕ್ಕಣೆಯನ್ನು ಮಾಡಿರುತ್ತೇವೆ

ಎಂದರೆ ಸರಿಯಲ್ಲ. ನನ್ನ ಸಮಕ್ಷಮ 1ನೇ ಪ್ರತಿವಾದಿ ನಿಪಿ.2 ಕ್ಕೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಕಬಳಿಸಲು ವಾದಿಯ ಚಿತಾವಣೆ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).**

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ, ಚನ್ನಪಟ್ಟಣ.**